# <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>

## ಸಿ. ಸಿ. ನಂ. 31/2021

| | | | |
|---|---|---|---|
| ಹೆಸರು ಶ್ರೀ/ಶ್ರೀಮತಿ | ಮಕಬುಲ ಅಹ್ಮದ | ಸಿಡಬ್ಲ್ಯೂ-05 | ಪಿಡಬ್ಲ್ಯೂ-01 |
| ತಂದೆಯ/ಗಂಡನ ಹೆಸರು | ಅಹ್ಮದ ಜಮಾದಾರ | | |
| ವಯಸ್ಸು | 40 ವರ್ಷ | | |
| ಉದ್ಯೋಗ | ವ್ಯಾಪಾರ | | |
| ವಾಸ ಸ್ಥಳ | ಸೇಡಂ | | |

ದಿನಾಂಕ 15-06-2023

ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ಇಬ್ರಾಹಿಮ ಅಹ್ಮದ ನನ್ನ ಸಹೋದರ ಇರುತ್ತಾರೆ. ಅವರು ರಸ್ತೆ ಅಪಘಾತದಲ್ಲಿ ತೀರಿಕೊಂಡಿರುತ್ತಾರೆ. ಅಪಘಾತ ಹೂಡಾ ಕ್ರಾಸ್ ಹತ್ತಿರ ಆಗಿರುತ್ತದೆ. ನನಗೆ ಪರಿಚಯದವರು ಫೋನ ಮೂಲಕ ರಸ್ತೆ ಅಪಘಾತದ ಬಗ್ಗೆ ತಿಳಿಸಿರುತ್ತಾರೆ. ನನ್ನ ತಮ್ಮ ನಮ್ಮ ಸಹೋದರಿ ಸೈನ ಬೇಗಂ ಇವಳನ್ನು ಬಿಟ್ಟು ಬರಲು ಕಾರ ಮೂಲಕ ಹೋಗಿದ್ದರು. ಕಾರಿನ ನಂಬರ ನನಗೆ ಹೇಳಲು ಬರುವುದಿಲ್ಲ. ಕಾರನ್ನು ಆರೋಪಿ ಇತ ಚಲಾಯಿಸುತ್ತಿದ್ದನು. ಆರೋಪಿ ಕಾರನ್ನು ಹೇಗೆ ಚಲಾಯಿಸುತ್ತಿದ್ದರು ಎಂದು ಹೇಳಲು ಬರುವುದಿಲ್ಲ. ಅಪಘಾತ ಯಾರ ತಪ್ಪಿನಿಂದ ಆಗಿರುತ್ತದೆ ಎಂದು ಗೊತ್ತಿಲ್ಲ. ನನ್ನ ಸಹೋದರನಿಗೆ ಎದೆಗೆ ಮತ್ತು ತಲೆಗೆ ಪೆಟ್ಟಾಗಿತ್ತು. ಅವರು ಅಪಘಾತ ಸ್ಥಳದಲ್ಲಿಯೇ ಮೃತಪಟ್ಟಿದ್ದರು. ಕಾರು ಯಾವ ವಾಹನಕ್ಕೆ ಹಾಯಿಸಿ ಅಪಘಾತಪಡಿಸಿತ್ತು ಎಂದು ನನಗೆ ಗೊತ್ತಿಲ್ಲ. ಘಟನೆಯ ಕುರಿತು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ಅಪಘಾತ ಸೇಡಂ-ಕೊಡಂಗಲ್ ರೋಡಿನ ರಂಜೋಳ ಕ್ರಾಸ ಹತ್ತಿರ ಆಗಿರುತ್ತದೆ ಎಂದರೆ ಸರಿ. ನನ್ನ ಸಹೋದರ ತನ್ನೊಂದಿಗೆ ತೆಗೆದುಕೊಂಡು ಹೋದ ಕಾರ ನಂ.ಕೆಎ-32 ಎನ್-4356

ಎಂದರೆ ನನಗೆ ನೆನಪಿಲ್ಲ. ಆರೋಪಿ ತಾನು ನಡೆಸುತ್ತಿದ್ದ ಕಾರು ನಂ.ಕೆಎ–32 ಎನ್–4353 ನ್ನೆದ್ದನ್ನು ಅತೀ ಜೋರಿನಿಂದ ಮತ್ತು ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ರಸ್ತೆಯ ಎಡಬದಿಯಿಂದ ಹೋಗುತ್ತಿದ್ದ ಒಂದು ಮೋಟಾರು ಸೈಕಲಗೆ ಡಿಕ್ಕಿಪಡಿಸಿ ಅಪಘಾತ ಮಾಡಿದ್ದರಿಂದ ಮೋಟಾರ ಸೈಕಲ ಸಮೇತ ಸವಾರ ಬಿದಿದ್ದು ಸದರಿ ಕಾರ ಚಾಲಕನ್ನು ನಿಯಂತ್ರಣ ತಪ್ಪಿ ಸ್ವಲ್ಪ ಮುಂದೆ ಹೋಗಿ ರಸ್ತೆಯ ಎಡಬದಿಯ ಹೊಲದಲ್ಲಿ ತನ್ನ ಕಾರ ಪಲ್ಟಿ ಮಾಡಿ ಅಪಘಾತಪಡಿಸಿದನು ಎಂಬುವುದಾಗಿ ಮೋಟಾರ ಸೈಕಲ ಚಾಲಕ ನಾಗಪ್ಪ ಸಂಗಪ್ಪ ಹೂಗಾರ ಇತನು ತಿಳಿಸಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಅಪಘಾತದ ವಿಷಯವನ್ನು ನನಗೆ ನಮ್ಮ ಪಕ್ಕದ ಮನೆಯವರಾದ ಮಕ್ಬೂದ ಮಹೇಬೂಬ ಅಲೀ ಪೋನ ಮೂಲಕ ತಿಳಿಸಿರುತ್ತಾನೆ ಎಂದರೆ ಸರಿಯಲ್ಲ. ಮೋಟಾರ ಸೈಕಲ ನಂ.ಎಪಿ–28 ಎಕೆ–8241 ಆಗಿತ್ತು ಎಂದರೆ ನಾನು ನೋಡಿಲ್ಲ. ಅಪಘಾತ ಕಾರು ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಈ ಕುರಿತು ನಾನು ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು ನಿಪಿ–1 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ. ದ. ನ್ಯಾ ದಂ. ಸೇಡಂ.

*SYH

# <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>

## ಸಿ. ಸಿ. ನಂ. 31/2021

| | | | |
|---|---|---|---|
| ಹೆಸರು ಶ್ರೀ/ಶ್ರೀಮತಿ | ನಸೀಮಾ ಬೇಗಂ | ಸಿಡಬ್ಲ್ಯೂ-04 | ಪಿಡಬ್ಲ್ಯೂ-02 |
| ತಂದೆಯ/ಗಂಡನ ಹೆಸರು | ಮಹ್ಮದ ಹುಸೇನ ಜಮಾದಾರ | | |
| ವಯಸ್ಸು | 63 ವರ್ಷ | | |
| ಉದ್ಯೋಗ | ಮನೆಗೆಲಸ | | |
| ವಾಸ ಸ್ಥಳ | ಸೇಡಂ | | |

ದಿನಾಂಕ 15-06-2023

ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ಇಬ್ರಾಹಿಮ ಅಹ್ಮದ ನನ್ನ ಕಿರಿಯ ಮಗ ಇರುತ್ತಾರೆ. ಅವರು ರಸ್ತೆ ಅಪಘಾತದಲ್ಲಿ ತೀರಿಕೊಂಡಿರುತ್ತಾರೆ. ಅಪಘಾತ ಹೂಡಾ ಕ್ರಾಸ್ ಹತ್ತಿರ ಆಗಿರುತ್ತದೆ. ನಮಗೆ ಪರಿಚಯದವರು ಪೋನ ಮೂಲಕ ರಸ್ತೆ ಅಪಘಾತದ ಬಗ್ಗೆ ತಿಳಿಸಿರುತ್ತಾರೆ. ನನ್ನ ಮಗ ನನ್ನ ಮಗಳಾದ ಸೈನ ಬೇಗಂ ಇವಳನ್ನು ಗಂಡನ ಮನೆಗೆ ಬಿಟ್ಟು ಬರಲು ಕಾರ ಮೂಲಕ ಹೋಗಿದ್ದನು. ಕಾರಿನ ನಂಬರ ನನಗೆ ಹೇಳಲು ಬರುವುದಿಲ್ಲ. ಕಾರನ್ನು ಯಾರು ಚಲಾಯಿಸುತ್ತಿದ್ದರು ಮತ್ತು ಹೇಗೆ ಚಲಾಯಿಸುತ್ತಿದ್ದರು ಎಂದು ಗೊತ್ತಿಲ್ಲ. ಅಪಘಾತ ಯಾರ ತಪ್ಪಿನಿಂದ ಆಗಿರುತ್ತದೆ ಎಂದು ಗೊತ್ತಿಲ್ಲ. ನನ್ನ ಮಗನಿಗೆ ಎಲ್ಲಿ ಪೆಟ್ಟಾಗಿದ್ದವು ಎಂದು ನಾನು ನೋಡಿಲ್ಲ. ಅವರು ಅಪಘಾತ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ಕಾರು ಯಾವ ವಾಹನಕ್ಕೆ ಹಾಯಿಸಿ ಅಪಘಾತಪಡಿಸಿತ್ತು ಎಂದು ನನಗೆ ಗೊತ್ತಿಲ್ಲ. ಘಟನೆಯ ಕುರಿತು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ಅಪಘಾತ ಸೇಡಂ-ಕೊಡಂಗಲ್ ರೋಡಿನ ರಂಜೋಳ ಕ್ರಾಸ ಹತ್ತಿರ ಆಗಿರುತ್ತದೆ ಎಂದರೆ ಸರಿ. ನನ್ನ ಮಗ ತನ್ನೊಂದಿಗೆ ತೆಗೆದುಕೊಂಡು ಹೋದ ಕಾರ ನಂ.ಕೆಎ-32 ಎನ್-4356 ಎಂದರೆ

ನನಗೆ ನೆನಪಿಲ್ಲ. ಆರೋಪಿ ತಾನು ನಡೆಸುತ್ತಿದ್ದ ಕಾರು ನಂ.ಕೆಎ–32 ಎನ್–4356 ನ್ನೆದ್ದನ್ನು ಅತೀ ಜೋರಿನಿಂದ ಮತ್ತು ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ರಸ್ತೆಯ ಎಡಬದಿಯಿಂದ ಹೋಗುತ್ತಿದ್ದ ಒಂದು ಮೋಟಾರು ಸೈಕಲಗೆ ಡಿಕ್ಕಿಪಡಿಸಿ ಅಪಘಾತ ಮಾಡಿದ್ದರಿಂದ ಮೋಟಾರ ಸೈಕಲ ಸಮೇತ ಸವಾರ ಬಿದಿದ್ದು ಸದರಿ ಕಾರ ಚಾಲಕನ್ನು ನಿಯಂತ್ರಣ ತಪ್ಪಿಸ್ವಲ್ಪ ಮುಂದೆ ಹೋಗಿ ರಸ್ತೆಯ ಎಡಬದಿಯ ಹೊಲದಲ್ಲಿ ತನ್ನ ಕಾರ ಪಲ್ಟಿ ಮಾಡಿ ಅಪಘಾತಪಡಿಸಿದನು ಎಂಬುವುದಾಗಿ ನನಗೆ ನನ್ನ ಮಗನಾದ ಚಾಸಾ–5 ಇವರಿಂದ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಮಗನಿಗೆ ಅಪಘಾತದಿಂದ ತಲೆಗೆ, ಎದೆಗೆ, ಹೊಟ್ಟೆಗೆ ಹಾಗೂ ಎರಡು ಕೈ ಕಾಲುಗಳಿಗೆ ಭಾರಿ ಪೆಟ್ಟಾಗಿತ್ತು ಎಂದರೆ ನಾನು ನೋಡಿಲ್ಲ. ಆರೋಪಿ ಚಾಲಕನಿಗೆ ಹೆಡಕಿಗೆ ಮತ್ತು ಮೈಕೈಗೆ ಪೆಟ್ಟಾಗಿತ್ತು ಎಂದರೆ ಸರಿಯಲ್ಲ. ಮೋಟಾರ ಸೈಕಲ ನಂ.ಎಪಿ–28 ಎಕೆ–8241 ಆಗಿತ್ತು ಎಂದರೆ ನಾನು ನೋಡಿಲ್ಲ. ಅಪಘಾತ ಕಾರು ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಈ ಕುರಿತು ನಾನು ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು ನಿಪಿ–2 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ. ದ. ನ್ಯಾ ದಂ. ಸೇಡಂ.

*SYH

# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

## ಸಿ. ಸಿ. ನಂ. 31/2021

| | | | |
|---|---|---|---|
| ಹೆಸರು ಶ್ರೀ/ಶ್ರೀಮತಿ | ಮಕಸೂದ ಅಹ್ಮದ | ಸಿಡಬ್ಲ್ಯೂ-06 | ಪಿಡಬ್ಲ್ಯೂ-03 |
| ತಂದೆಯ/ಗಂಡನ ಹೆಸರು | ಮಹ್ಮದ ಹುಸೇನ ಜಮಾದಾರ | | |
| ವಯಸ್ಸು | 34 ವರ್ಷ | | |
| ಉದ್ಯೋಗ | ವ್ಯಾಪಾರ | | |
| ವಾಸ ಸ್ಥಳ | ಸೇಡಂ | | |

ದಿನಾಂಕ 15-06-2023

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಇಬ್ರಾಹಿಮ ಅಹ್ಮದ ನನ್ನ ಸಹೋದರ ಇರುತ್ತಾರೆ. ಅವರು ರಸ್ತೆ ಅಪಘಾತದಲ್ಲಿ ತೀರಿಕೊಂಡಿರುತ್ತಾರೆ. ಅಪಘಾತ ಹೂಡಾ ಕ್ರಾಸ್ ಹತ್ತಿರ ಆಗಿರುತ್ತದೆ. ನನಗೆ ಪರಿಚಯದವರು ಪೋನ ಮೂಲಕ ರಸ್ತೆ ಅಪಘಾತದ ಬಗ್ಗೆ ತಿಳಿಸಿರುತ್ತಾರೆ. ನನ್ನ ತಮ್ಮ ನಮ್ಮ ಸಹೋದರಿ ಸೈನ ಬೇಗಂ ಇವಳನ್ನು ಬಿಟ್ಟು ಬರಲು ಕಾರ ಮೂಲಕ ಹೋಗಿದ್ದರು. ಕಾರಿನ ನಂಬರ ನನಗೆ ಹೇಳಲು ಬರುವುದಿಲ್ಲ. ಕಾರನ್ನು ಆರೋಪಿ ಇತ ಚಲಾಯಿಸುತ್ತಿದ್ದನು. ಆರೋಪಿ ಕಾರನ್ನು ಹೇಗೆ ಚಲಾಯಿಸುತ್ತಿದ್ದರು ಎಂದು ಹೇಳಲು ಬರುವುದಿಲ್ಲ. ಅಪಘಾತ ಯಾರ ತಪ್ಪಿನಿಂದ ಆಗಿರುತ್ತದೆ ಎಂದು ಗೊತ್ತಿಲ್ಲ. ನನ್ನ ಸಹೋದರನಿಗೆ ಎದೆಗೆ ಮತ್ತು ತಲೆಗೆ ಪೆಟ್ಟಾಗಿತ್ತು. ಅವರು ಅಪಘಾತ ಸ್ಥಳದಲ್ಲಿಯೇ ಮೃತಪಟ್ಟಿದ್ದರು. ಕಾರು ಯಾವ ವಾಹನಕ್ಕೆ ಹಾಯಿಸಿ ಅಪಘಾತಪಡಿಸಿತ್ತು ಎಂದು ನನಗೆ ಗೊತ್ತಿಲ್ಲ. ಘಟನೆಯ ಕುರಿತು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ.

(**ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.**)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಅಪಘಾತ ಸೇಡಂ-ಕೊಡಂಗಲ್ ರೋಡಿನ ರಂಜೋಳ ಕ್ರಾಸ ಹತ್ತಿರ ಆಗಿರುತ್ತದೆ ಎಂದರೆ ಸರಿ. ನನ್ನ ಸಹೋದರ ತನ್ನೊಂದಿಗೆ ತೆಗೆದುಕೊಂಡು ಹೋದ ಕಾರ ನಂ.ಕೆಎ-32 ಎನ್-4356

ಎಂದರೆ ನನಗೆ ನೆನಪಿಲ್ಲ. ಆರೋಪಿ ತಾನು ನಡೆಸುತ್ತಿದ್ದ ಕಾರು ನಂ.ಕೆಎ–32 ಎನ್–4356 ನ್ನೆದ್ದನ್ನು ಅತೀ ಜೋರಿನಿಂದ ಮತ್ತು ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ರಸ್ತೆಯ ಎಡಬದಿಯಿಂದ ಹೋಗುತ್ತಿದ್ದ ಒಂದು ಮೋಟಾರು ಸೈಕಲಗೆ ಡಿಕ್ಕಿಪಡಿಸಿ ಅಪಘಾತ ಮಾಡಿದ್ದರಿಂದ ಮೋಟಾರ ಸೈಕಲ ಸಮೇತ ಸವಾರ ಬಿದಿದ್ದು ಸದರಿ ಕಾರ ಚಾಲಕನ್ನು ನಿಯಂತ್ರಣ ತಪ್ಪಿ ಸ್ವಲ್ಪ ಮುಂದೆ ಹೋಗಿ ರಸ್ತೆಯ ಎಡಬದಿಯ ಹೊಲದಲ್ಲಿ ತನ್ನ ಕಾರ ಪಲ್ಟಿ ಮಾಡಿ ಅಪಘಾತಪಡಿಸಿದನು ಎಂಬುವುದಾಗಿ ಮೋಟಾರ ಸೈಕಲ ಚಾಲಕ ನಾಗಪ್ಪ ಸಂಗಪ್ಪ ಹೂಗಾರ ಇತನು ತಿಳಿಸಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಅಪಘಾತದ ವಿಷಯವನ್ನು ನನಗೆ ನಮ್ಮ ಪಕ್ಕದ ಮನೆಯವರಾದ ಮಕ್ತುದ ಮಹೇಬೂಬ ಅಲೀ ಪೋನ ಮೂಲಕ ತಿಳಿಸಿರುತ್ತಾನೆ ಎಂದರೆ ಸರಿಯಲ್ಲ. ಅಪಘಾತ ಕಾರು ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಮೋಟಾರ ಸೈಕಲ ನಂ.ಎಪಿ–28 ಎಕೆ–8241 ಆಗಿತ್ತು ಎಂದರೆ ನಾನು ನೋಡಿಲ್ಲ. ಈ ಕುರಿತು ನಾನು ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು ನಿಪಿ–3 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ. ದ. ನ್ಯಾ ದಂ. ಸೇಡಂ.

*SYH*